ರಾಮದೇವರ ಬೆಟ್ಟ ರಣಹದ್ದಿನ ಮರಿಗಳ ಬಿಡುಗಡೆಗೆ ಸೀಮಿತ: ಪಕ್ಷಿಪ್ರಿಯರಿಗೆ ನಿರಾಸೆ

ಬನ್ನೇರುಘಟ್ಟದಲ್ಲೇ ಸಂತಾನೋತ್ಪತ್ತಿ

ಪ್ರಜಾವಾಣಿ ವಾರ್ತೆ

ರಾಮನಗರ: ದೇಶದ ಕೆಲವೇ ರಣಹದ್ದು ಸಂರಕ್ಷಣಾ ಧಾಮಗಳಲ್ಲಿ ಒಂದಾದ ಇಲ್ಲಿನ ರಾಮದೇವರ ಬೆಟ್ಟದಲ್ಲಿ ರಣಹದ್ದುಗಳ ಸಂತಾನೋತ್ಪತ್ತಿ ಕೇಂದ್ರ ಸ್ಥಾಪನೆ ಕನಸು ದೂರವಾಗಿದ್ದು, ಬನ್ನೇರುಘಟ್ಟಕ್ಕೆ ಸ್ಥಳಾಂತರಗೊಳ್ಳಲಿದೆ. ಬೆಟ್ಟವು ಹದ್ದಿನ ಮರಿಗಳ ಬಿಡುಗಡೆ ತಾಣವಾಗಿ ಉಳಿಯಲಿದೆ.

ಉದ್ದ ಕೊಕ್ಕಿನ ರಣಹದ್ದುಗಳ ಸಂತತಿಯು ತೀರ ಅಳಿವಿನ ಅಂಚಿನಲ್ಲಿದೆ. ಇಂದು ದೇಶದಲ್ಲಿ ಈ ಜಾತಿಯ ಕೆಲವೇ ಸಾವಿರದಷ್ಟು ಹದ್ದುಗಳು ಮಾತ್ರ ಉಳಿದುಕೊಂಡಿವೆ. ಈ ಹಿನ್ನೆಲೆಯಲ್ಲಿ ಹದ್ದುಗಳ ಸಂತಾನೋತ್ಪತ್ತಿ ಕೇಂದ್ರ ತೆರೆಯುವುದಾಗಿ ಅರಣ್ಯ ಇಲಾಖೆ ಘೋಷಿಸಿತ್ತು. ರಾಮದೇವರ ಬೆಟ್ಟದಲ್ಲಿಯೇ ಈ ಕೇಂದ್ರ ಆರಂಭಿಸಲಾಗುತ್ತದೆ ಎಂದು ಹೇಳಲಾಗಿತ್ತಾದರೂ ಹಲವು ಕಾರಣಗಳಿಗೆ ಬನ್ನೇರುಘಟ್ಟ ಜೈವಿಕ ಉದ್ಯಾನದಲ್ಲಿ ಈ ಕೇಂದ್ರ ಆರಂಭಕ್ಕೆ ಅಧಿಕಾರಿಗಳು ಮುಂದಾಗಿದ್ದಾರೆ.

ರಾಮನಗರದಲ್ಲಿ ರಣಹದ್ದು ಸಂತಾನೋತ್ಪತ್ತಿ ಕೇಂದ್ರ ಸ್ಥಾಪನೆ ಮಾಡಬೇಕು ಎನ್ನುವುದು ದಶಕಗಳ ಬೇಡಿಕೆ. ರಾಸುಗಳಿಗೆ ಬಳಕೆ ಮಾಡಲಾಗುತ್ತಿದ್ದ ಡೈಕ್ಲೋಫಿನೆಕ್ ಔಷಧದ ದುಷ್ಪರಿಣಾಮದಿಂದ ಕಣ್ಮರೆಯಾಗಿರುವ ರಣಹದ್ದುಗಳನ್ನು ಉಳಿಸಿಕೊಳ್ಳುವ ಮತ್ತು ಇವುಗಳ ಸಂತತಿಯನ್ನು ಮತ್ತಷ್ಟು ಹೆಚ್ಚಿಸುವ ಸಲುವಾಗಿ ರಾಮನಗರದಲ್ಲಿ ಸಂತಾನೋತ್ಪತ್ತಿ ಕೇಂದ್ರವನ್ನು ಆರಂಭಿಸುವ ಸಂಬಂಧ ರಾಮನಗರ ಪ್ರಾದೇಶಿಕ ಅರಣ್ಯ ಇಲಾಖೆ, ರಾಜ್ಯ ಅರಣ್ಯ ಇಲಾಖೆ ಕೇಂದ್ರ ಕಚೇರಿಗೆ ವಿಸ್ತೃತ ಯೋಜನಾ ವರದಿಯೊಂದಿಗೆ ಮನವಿ ಮಾಡಿತ್ತು.

ಮುಖ್ಯಾಂಶಗಳು

- ಬನ್ನೇರುಘಟ್ಟ ಜೈವಿಕ ಉದ್ಯಾನದಲ್ಲಿ ಹೆಚ್ಚಿನ ಸೌಕರ್ಯ ಹಿನ್ನೆಲೆ
- ತಜ್ಞರ ಸಲಹೆಯಂತೆ ಕೇಂದ್ರ ತೆರೆಯಲು ಅರಣ್ಯ ಇಲಾಖೆ ನಿರ್ಧಾರ
- ಧಾಮದಿಂದ ಕನಿಷ್ಠ 5 ಕಿ.ಮೀ. ಅಂತರದಲ್ಲಿ ಕೇಂದ್ರವಿದ್ದರೆ ಅನುಕೂಲ

ಬನ್ನೇರುಘಟ್ಟ ಜೈವಿಕ ಉದ್ಯಾನದೊಳಗೇ ಈ ಕೇಂದ್ರ ಸ್ಥಾಪನೆ ಮಾಡಿದಲ್ಲಿ ರಣಹದ್ದುಗಳಿಗೆ ರೋಗ ಬಾಧೆ ಆತಂಕ ಹೆಚ್ಚು. ರಾಮನಗರದಲ್ಲೇ ಕೇಂದ್ರ ತೆರೆಯಬೇಕು
ಬಿ.ಶಶಿಕುಮಾರ್, ಕಾರ್ಯದರ್ಶಿ ಕರ್ನಾಟಕ ರಣಹದ್ದು ಸಂರಕ್ಷಣಾ ಟ್ರಸ್ಟ್

ತಜ್ಞರ ಸಲಹೆಯಂತೆ ಬನ್ನೇರುಘಟ್ಟದಲ್ಲಿ ರಣಹದ್ದು ಸಂತಾನೋತ್ಪತ್ತಿ ಕೇಂದ್ರ ಆರಂಭವಾಗಲಿದೆ. ರಾಮನಗರದ ಪರಿಸರಕ್ಕೆ ಈ ಹದ್ದುಗಳನ್ನು ಬಿಡುಗಡೆ ಮಾಡಲಾಗುವುದು
ಸದಾಶಿವ ಎನ್.ಹೆಗಡೆ ಡಿಸಿಎಫ್, ರಾಮನಗರ

ಬಾಂಬೆ ನ್ಯಾಚುರಲ್ ಹಿಸ್ಟರಿ ಸೊಸೈಟಿಯ (ಬಿಎನ್‌ಎಚ್‌ಎಸ್) ಉಪ ನಿರ್ದೇಶಕ ಡಾ.ವಿಭು ಪ್ರಕಾಶ್ ಮಾರ್ಗದರ್ಶನದಲ್ಲಿ ಸಮಗ್ರ ಯೋಜನಾ ವರದಿ ಸಿದ್ದಪಡಿಸಿ, ರಾಮನಗರದಲ್ಲಿಯೇ ರಣಹದ್ದು ಸಂತಾನೋತ್ಪತ್ತಿ ಕೇಂದ್ರ ಸ್ಥಾಪಿಸುವಂತೆ ಸರ್ಕಾರಕ್ಕೆ ಪ್ರಸ್ತಾವ ಸಲ್ಲಿಸಲಾಗಿತ್ತು. ಅದರಂತೆ ಮುಖ್ಯಮಂತ್ರಿ ಬಿ.ಎಸ್. ಯಡಿಯೂರಪ್ಪ ಕಳೆದ ಮಾರ್ಚ್‌ನಲ್ಲಿ ಮಂಡಿಸಿದ್ದ ಬಜೆಟ್‌ನಲ್ಲಿ ಈ ಯೋಜನೆ ಘೋಷಣೆ ಮಾಡಿದ್ದು, ಇದಕ್ಕಾಗಿ ₹ 2 ಕೋಟಿ ಅನುದಾನವನ್ನೂ ಘೋಷಿಸಿದ್ದರು.

ಪ್ರಸ್ತುತ ಇರುವ ರಣಹದ್ದು ಧಾಮದಿಂದ ಕನಿಷ್ಠ 5 ಕಿಮೀ ದೂರದಲ್ಲಿ ಸಂತಾನೋತ್ಪತ್ತಿ ಕೇಂದ್ರವನ್ನು ಸ್ಥಾಪನೆ ಮಾಡಬೇಕಿದೆ ಎನ್ನುವುದು ಯೋಜನಾ ವರದಿಯಲ್ಲಿ ನಮೂದಾಗಿತ್ತು. ಮೊದಲಿಗೆ ಕನಿಷ್ಠ 25 ಜೊತೆ ಉದ್ದಕೊಕ್ಕಿನ ರಣಹದ್ದುಗಳನ್ನು ಸಂತಾನೋತ್ಪತ್ತಿಗಾಗಿ ಬಳಕೆ ಮಾಡಿಕೊಳ್ಳುವುದು. ಇವುಗಳಿಂದ ಪಡೆದ ಮರಿಗಳನ್ನು ತಜ್ಞರ ನಿಗಾವಣೆಯಲ್ಲಿ ಇಟ್ಟು ಅವುಗಳ ಚಲನವಲನಗಳನ್ನು ಸಂಪೂರ್ಣ ತಿಳಿದುಕೊಂಡ ಮೇಲೆ ಅವುಗಳನ್ನು ಇಲ್ಲಿನ ಪರಿಸರಕ್ಕೆ ಬಿಡುಗಡೆ ಮಾಡಲು ಯೋಜಿಸಲಾಗಿತ್ತು. ಇದಕ್ಕಾಗಿ ಕನಿಷ್ಠ 3-4 ವರ್ಷ ಸಮಯ ಬೇಕಾಗಬಹುದು ಎಂದು ವರದಿಯಲ್ಲಿ ವಿವರಿಸಲಾಗಿತ್ತು.

ರಾಮದೇವರ ಬೆಟ್ಟದಲ್ಲಿನ ಉದ್ದಕೊಕ್ಕಿನ ರಣಹದ್ದು

ಅಳಿವಿನಂಚಿನ ಜೀವಿ

ದೇಶದಲ್ಲಿ ಸದ್ಯ ವಿವಿಧ ಜಾತಿಯ ರಣಹದ್ದುಗಳ ಸಂಖ್ಯೆ ಕೇವಲ 19 ಸಾವಿರಕ್ಕೆ ಬಂದು ತಲುಪಿದೆ. ಪ್ರಸ್ತುತ ದೇಶದಲ್ಲಿ ವೈಟ್ ಬ್ಯಾಕ್ಡ್ ಹದ್ದು 6 ಸಾವಿರ, ಉದ್ದ ಕೊಕ್ಕಿನ ರಣಹದ್ದು 12 ಸಾವಿರ ಮತ್ತು ಸ್ಲೆಂಡೆಡ್ ಬಿಲ್ಲಡ್ ವಲ್ಚರ್ ಕೇವಲ ಒಂದು ಸಾವಿರ ಇವೆ ಎಂದು ಅಂದಾಜಿಸಲಾಗಿದೆ. ರಾಮದೇವರ ಬೆಟ್ಟದಲ್ಲೂ ಸಾವಿರ ಲೆಕ್ಕದಲ್ಲಿ ಇದ್ದ ರಣಹದ್ದುಗಳು ಈಗ ಬೆರಳೆಣಿಕೆಯಷ್ಟಿವೆ. ಜೊತೆಗೆ ಕಳೆದ ನಾಲ್ಕು ವರ್ಷಗಳಿಂದ ಸಂತಾನೋತ್ಪತ್ತಿ ನಡೆಸುವ ಯಾವುದೇ ಚಟುವಟಿಕೆ ಕಂಡು ಬಂದಿಲ್ಲ.

ಬನ್ನೇರುಘಟ್ಟವೇ ಏಕೆ?

ಬನ್ನೇರುಘಟ್ಟ ಜೈವಿಕ ಉದ್ಯಾನದಲ್ಲಿ ಈ ಕೇಂದ್ರ ಸ್ಥಾಪನೆ ಮಾಡುವುದರಿಂದ ವೈದ್ಯರು ಮತ್ತು ಸಿಬ್ಬಂದಿ ಲಭ್ಯತೆ ಸದಾಕಾಲ ದೊರೆಯುತ್ತದೆ. ಹೆಚ್ಚಿನ ಸೌಕರ್ಯದ ಅಗತ್ಯವೂ ಇರುವುದಿಲ್ಲ ಎನ್ನುವ ಕಾರಣಕ್ಕೆ ಅರಣ್ಯ ಇಲಾಖೆ ಈ ನಿರ್ಧಾರಕ್ಕೆ ಬಂದಿದೆ. ಆದರೆ ಹದ್ದುಗಳ ಆರೋಗ್ಯದ ದೃಷ್ಟಿಯಿಂದ ಕನಿಷ್ಠ 5 ಕಿ.ಮೀ. ಅಂತರದಲ್ಲಿ ಈ ಕೇಂದ್ರ ತೆರೆಯಬೇಕು. ಇಲ್ಲವಾದಲ್ಲಿ ಉಳಿದ ಪ್ರಾಣಿ-ಪಕ್ಷಿಗಳ ಸೋಂಕು ಸುಲಭವಾಗಿ ರಣಹದ್ದುಗಳಿಗೆ ತಗುಲಬಹುದು ಎನ್ನುವ ಆತಂಕವನ್ನು ತಜ್ಞರು ವ್ಯಕ್ತಪಡಿಸುತ್ತಾರೆ.

ದೇಗುಲದಲ್ಲೇ ಕರಗ ಆಚರಣೆ

ರಾಮನಗರ: ನಗರದ ಶಕ್ತಿದೇವತೆಗಳ ಸಾಂಪ್ರದಾಯಿಕ ಕರಗ ಮಹೋತ್ಸವವು ಮಂಗಳವಾರ ಆಯಾ ದೇಗುಲಗಳ ಆವರಣದಲ್ಲಿ ಸರಳವಾಗಿ ನೆರವೇರಿತು.

ಚಾಮುಂಡೇಶ್ವರಿ, ಮಗ್ಗದಕೆರೆ ಮಾರಮ್ಮ, ಭಂಡಾರಮ್ಮ, ಬಿಸಲು ಮಾರಮ್ಮ, ಕೊಂಕಾಣಿದೊಡ್ಡಿ, ಐಜೂರು ಶೆಟ್ಟಿಹಳ್ಳಿ ಬೀದಿ ಆದಿಶಕ್ತಿ, ಮುತ್ತು ಮಾರಮ್ಮ ಅಮ್ಮನವರ ಕರಗಗಳು ನಡೆದವು. ಬೆಳಗ್ಗೆ ದೇವಾಲಯಗಳಲ್ಲಿ ಮಡಿ ನೀರು ಕರಗ ಜರುಗಿತು. ಸಂಜೆ ಹೂವಿನ ಕರಗ ಜರುಗಿತು. ದೇವರ ಮೂರ್ತಿಗಳಿಗೆ ವಿಶೇಷ ಪೂಜೆ ಮತ್ತು ಅಲಂಕಾರ ಏರ್ಪಡಿಸಲಾಗಿತ್ತು. ರಾತ್ರಿ ಮಹಿಳೆಯರು ತಂಬಿಟ್ಟಿನ ಆರತಿ ಬೆಳಗಿದರು. ದಿನವಿಡೀ ಭಕ್ತರು ಭೇಟಿ ನೀಡಿದರು.

ಚಾಮುಂಡೇಶ್ವರಿ ದೇಗುಲದಲ್ಲಿ ದೇವಿಯ ಮೂರ್ತಿಗೆ ಮಾಡಿದ್ದ ಮಹಿಷಾಮರ್ದಿನಿ ವಿಶೇಷ ಅಲಂಕಾರ ಗಮನ ಸೆಳೆಯಿತು. ಕರಗ ಸಂದರ್ಭ ಪರಸ್ಪರ ಅಂತರ ಕಾಯ್ದುಕೊಂಡಿದ್ದು, ಭಕ್ತರು ಸಹ ಮಾಸ್ಕ್ ಧರಿಸಿ ಬಂದಿದ್ದರು. ದೇಗುಲದ ಆವರಣದಲ್ಲಿ ಸೋಂಕು ನಿವಾರಕ ಟನಲ್ ಸಹ ಹಾಕಲಾಗಿತ್ತು.

ಚಾಮುಂಡೇಶ್ವರಿ ದೇವರ ಮೂರ್ತಿಗೆ ಮಂಗಳವಾರ ವಿಶೇಷ ಅಲಂಕಾರ ಮಾಡಲಾಗಿತ್ತು

ಜಗಜೀವನ್ ರಾಂ ಪುಣ್ಯತಿಥಿ

ಪ್ರಜಾವಾಣಿ ವಾರ್ತೆ

ಮಾಗಡಿ: ತಹಶೀಲ್ದಾರ್ ಕಚೇರಿ ಸಭಾಂಗಣದಲ್ಲಿ ಸೋಮವಾರ ತಾಲ್ಲೂಕು ಸಮಾಜ ಕಲ್ಯಾಣ ಇಲಾಖೆ ವತಿಯಿಂದ ಮಾಜಿ ಉಪಪ್ರಧಾನಿ ಡಾ.ಬಾಬು ಜಗಜೀವನ್ ರಾಂ 34ನೇ ಪುಣ್ಯತಿಥಿಯನ್ನು ಸಾಂಕೇತಿಕವಾಗಿ ಆಚರಿಸಲಾಯಿತು.

ಸಮಾಜ ಕಲ್ಯಾಣ ಅಧಿಕಾರಿ ಕುಮಾರಸ್ವಾಮಿ, ಭಾವಚಿತ್ರಕ್ಕೆ ಪೂಜೆ ಸಲ್ಲಿಸಿದರು.

ತಾಲ್ಲೂಕು ಪಂಚಾಯಿತಿ ಸದಸ್ಯ ಎಂ.ಜಿ.ನರಸಿಂಹ ಮೂರ್ತಿ, ತಾಲ್ಲೂಕು ದಲಿತ ಸಂಘರ್ಷ ಸಮಿತಿ ಸಂಚಾಲಕ ದೊಡ್ಡಯ್ಯ, ಕಾಂಗ್ರೆಸ್ ಪರಿಶಿಷ್ಟ ಜಾತಿ, ಪಂಗಡ ಘಟಕದ ಅಧ್ಯಕ್ಷ ತೋಟದ ಮನೆ ಗಿರೀಶ್, ಸಮಾಜಕಲ್ಯಾಣ ಇಲಾಖೆ ವಾರ್ಡನ್‌ಗಳಾದ ಧರಣೇಶ್, ಕೃಷ್ಣಪ್ರಸಾದ್, ರವಿಕುಮಾರ್, ಶೇಖರ್ ಪ್ರಸಾದ್, ತಹಶೀಲ್ದಾರ್ ಕಚೇರಿಯ ನೌಕರರಾದ ಶಿವಕುಮಾರ್, ಕಿರಣ್, ಮೀನಾಕ್ಷಮ್ಮ ಬಾಬು ಜಗಜೀವನ್‌ರಾಮ್ ಭಾವಚಿತ್ರಕ್ಕೆ ಪುಷ್ಪನಮನ ಸಲ್ಲಿಸಿದರು. ಅಧಿಕಾರಿಗಳು ಇದ್ದರು.

ಹಕ್ಕುಪತ್ರ ವಿತರಣೆ ವಿವಾದ: ಚಕಮಕಿ

ಪರುವಯ್ಯನಪಾಳ್ಯ: ಯಥಾಸ್ಥಿತಿ ಕಾಯ್ದುಕೊಳ್ಳಲು ತಹಶೀಲ್ದಾರ್ ಸೂಚನೆ

ಪ್ರಜಾವಾಣಿ ವಾರ್ತೆ

ಕನಕಪುರ: ಭೂಮಿಯ ಹಕ್ಕುಪತ್ರ ವಿತರಣೆಯಾಗಿರುವ ಸ್ಥಳದ ಪರಿಶೀಲನೆಯನ್ನು ತಹಶೀಲ್ದಾರ್ ನಡೆಸುತ್ತಿದ್ದಾಗ ಎರಡು ಗುಂಪುಗಳ ನಡುವೆ ಮಾತಿನ ಚಕಮಕಿಯು ಪರುವಯ್ಯನಪಾಳ್ಯದಲ್ಲಿ ನಡೆದಿದೆ.

ತಾಲ್ಲೂಕಿನ ಹಾರೋಹಳ್ಳಿ ಹೋಬಳಿ ಕಗ್ಗಲಹಳ್ಳಿ ಗ್ರಾಮ ಪಂಚಾಯಿತಿ ವ್ಯಾಪ್ತಿಯ ಪರುವಯ್ಯನಪಾಳ್ಯ ಗ್ರಾಮದಲ್ಲಿ 40 ಕುಟುಂಬಕ್ಕೆ ನಿವೇಶನ ಹಂಚಲಾಗಿದೆ. ಗೋಮಾಳ ಸರ್ವೆ ನಂ. 50ರಲ್ಲಿ ಪಂಚಾಯಿತಿ ವತಿಯಿಂದ 2 ಎಕರೆ ಜಾಗದಲ್ಲಿ ನಿವೇಶನ ಹಂಚಿಕೆ ಮಾಡಿ 2000ರಲ್ಲಿ ಆಗಿನ ತಾಲ್ಲೂಕು ಪಂಚಾಯಿತಿ ಕಾರ್ಯನಿರ್ವಾಹಕ ಅಧಿಕಾರಿ ಹಕ್ಕು ಪತ್ರ ನೀಡಿದ್ದರು.

ಈ ಜಾಗದಲ್ಲಿ ಹಕ್ಕುಪತ್ರ ಪಡೆದವರು ಗುಡಿಸಲು, ಮನೆ ನಿರ್ಮಾಣ ಮಾಡಿಕೊಳ್ಳಲು ಮುಂದಾದಾಗ ಖಾಸಗಿ ವ್ಯಕ್ತಿಯೊಬ್ಬರು ಇದೇ 2 ಎಕರೆ ಜಾಗವು ತಮಗೆ ಸೇರಬೇಕಾಗಿದ್ದು, ಈ ಜಾಗದಲ್ಲಿ ಗುಡಿಸಲು ನಿರ್ಮಾಣ ಮಾಡಬೇಡಿ ಎಂದು ತಡೆ ನೀಡಿದ್ದರು. ಹಕ್ಕುಪತ್ರ ಪಡೆದವರು ಯಾವುದೇ ಕೆಲಸ ಮಾಡದಂತೆ ಖಾಸಗಿ ವ್ಯಕ್ತಿಯು ತಡೆಯುತ್ತಿದ್ದರಿಂದ ಹಕ್ಕುಪತ್ರ ಪಡೆದ ಫಲಾನುಭವಿಗಳು ತಾಲ್ಲೂಕು ಪಂಚಾಯ್ತಿ ಇ.ಒ ಮತ್ತು ತಹಶೀಲ್ದಾರ್‌ಗೆ ದೂರು ನೀಡಿದ್ದರು.

ತಾಲ್ಲೂಕು ಪಂಚಾಯಿತಿ ಅಧಿಕಾರಿ ಇ ಒ ಶಿವರಾಮ್, ಪಿಡಿಒ ಸಿದ್ದಮುಗಿಲೇಗೌಡ ಅವರು ಸ್ಥಳಕ್ಕೆ ಭೇಟಿ ನೀಡಿ ಪರಿಶೀಲನೆ ನಡೆಸಿ ಹಕ್ಕುಪತ್ರ ವಿತರಣೆ ಮಾಡಿರುವ ಜಾಗವು ಸರಿಯಾಗಿದ್ದು, ಅಲ್ಲಿಯೇ ಫಲಾನುಭವಿಗಳು ಮನೆ ಕಟ್ಟಿಕೊಳ್ಳಬಹುದೆಂದು ಸೂಚಿಸಿದ್ದರು. ನಂತರ ತಹಶೀಲ್ದಾರ್ ವರ್ಷ ಒಡೆಯರ್ ಕಂದಾಯ ಅಧಿಕಾರಿಗಳೊಂದಿಗೆ ತೆರಳಿ ಸ್ಥಳ ಪರಿಶೀಲನೆ ನಡೆಸಲು ಮುಂದಾದಾಗ ಖಾಸಗಿ ವ್ಯಕ್ತಿಯು ಗೋಮಾಳ ಜಾಗವು 250 ಕ್ಕೂ ಹೆಚ್ಚು ಎಕರೆ ಪ್ರದೇಶವಿದ್ದು, ನೀವು ಹಕ್ಕುಪತ್ರ ಕೊಟ್ಟಿರುವ ಜಾಗ ಬೇರೆ ಇರಬೇಕು. ಅದನ್ನು ಗುರುತಿಸಿ ಅಲ್ಲಿ ಬಡವರಿಗೆ ನಿವೇಶನ ನೀಡಿ ಎಂದು ಆಗ್ರಹಿಸಿದರು.

ಹಕ್ಕುಪತ್ರ ಪಡೆದವರು 20 ವರ್ಷಗಳ ಹಿಂದೆ 40 ಮಂದಿಗೆ ಹಕ್ಕುಪತ್ರವನ್ನು ಇದೇ ಜಾಗದಲ್ಲಿ ಕೊಡಲಾಗಿದೆ. ನಮಗೆ ಮನೆ ನಿರ್ಮಿಸಿಕೊಳ್ಳಲು ಅವಕಾಶ ಕಲ್ಪಿಸಿಕೊಡಿ ಎಂದು ತಹಶೀಲ್ದಾರ್ ಅವರನ್ನು ಒತ್ತಾಯಿಸಿದರು. ಖಾಸಗಿ ವ್ಯಕ್ತಿಯು ಇದು ನಮಗೆ ಸೇರಿರುವ ಜಮೀನು, ಸರ್ಕಾರದಿಂದ ಕೊಡಲು ಬರುವುದಿಲ್ಲ. ನಮ್ಮ ಜಮೀನು ನಮಗೆ ಕೊಟ್ಟು, ಸರ್ಕಾರ ಬೇರೆಕಡೆ ಕೊಡಿ ಎಂದು ಆಗ್ರಹಿಸಿದರು.

ಎರಡೂ ಕಡೆಯವರು ಗಲಾಟೆ ಮಾಡಿದ್ದರಿಂದ ತಹಶೀಲ್ದಾರ್ ವರ್ಷ ಒಡೆಯರ್ ಭೂಮಿ ಒಡೆತನಕ್ಕೆ ಸಂಬಂಧಿಸಿದಂತೆ ದಾಖಲಾತಿಗಳನ್ನು ಪರಿಶೀಲಿಸುವವರೆಗೆ ಯಾರೂ ಈ ಜಾಗದಲ್ಲಿ ಏನು ಕೆಲಸ ಮಾಡಬಾರದು. ಯಥಾ ಸ್ಥಿತಿ ಕಾಪಾಡಬೇಕು ಎಂದು ಆದೇಶಿಸಿದರು.

ಪರುವಯ್ಯನಪಾಳ್ಯದಲ್ಲಿ ತಹಶೀಲ್ದಾರ್ ಸ್ಥಳ ಪರಿಶೀಲನೆ ವೇಳೆ ಎರಡೂ ಗುಂಪುಗಳ ನಡುವೆ ಮಾತಿನ ಚಕಮಕಿ ನಡೆಯಿತು

ಮುಖ್ಯಾಂಶಗಳು

- ತಹಶೀಲ್ದಾರ್ ಸ್ಥಳ ಪರಿಶೀಲನೆ ವೇಳೆ ಮಾತಿನ ಚಕಮಕಿ
- 2000ರಲ್ಲಿ 40 ಕುಟುಂಬಕ್ಕೆ ಗ್ರಾಮದ ಗೋಮಾಳದ ಭೂಮಿಯಲ್ಲಿ ನಿವೇಶನ
- ಫಲಾನುಭವಿಗಳು ಮನೆ ಕಟ್ಟಲು ಖಾಸಗಿ ವ್ಯಕ್ತಿಯಿಂದ ಅಡಚಣೆ

ಸಿಡಿಲಿನ ರಕ್ಷಣೆಗೆ 'ದಾಮಿನಿ ಆ್ಯಪ್'

ಮಾಗಡಿ: ಸಿಡಿಲು- ಮಿಂಚಿನಿಂದ ರೈತರ ಪ್ರಾಣ ರಕ್ಷಣೆಗಾಗಿ ಕೇಂದ್ರ ಸರ್ಕಾರದ ಭೂ ವಿಜ್ಞಾನ ಸಚಿವಾಲಯ 'ದಾಮಿನಿ ಆ್ಯಪ್' ಅಭಿವೃದ್ಧಿ ಪಡಿಸಿದ್ದು, ಇದು ರೈತರಿಗಲ್ಲದೇ ನಗರವಾಸಿಗಳಿಗೂ ಅನುಕೂಲವಾಗಿದೆ ಎಂದು ಕೃಷಿ ವಿಜ್ಞಾನ ಕೇಂದ್ರ ಮುಖ್ಯಸ್ಥೆ ಡಾ.ಸವಿತಾ ಎಸ್.ಮಂಗನವರ್ ತಿಳಿಸಿದರು.

ಕೃಷಿ ವಿಜ್ಞಾನ ಕೇಂದ್ರದ ವಿಜ್ಞಾನಿಗಳು ಮತ್ತು ರೈತರ ಸಹಮತ ಸಭೆಯಲ್ಲಿ ಮಾತನಾಡಿದ ಅವರು, ಮಳೆಗಾಲದಲ್ಲಿ ಕೃಷಿ ಚಟುವಟಿಕೆಗಳಲ್ಲಿ ತೊಡಗಿಸಿಕೊಂಡಿರುವ ರೈತರು ಸಿಡಿಲಿಗೆ ತುತ್ತಾಗುತ್ತಿದ್ದರು. ದಾಮಿನಿ ಆ್ಯಪ್ ಬಳಸುವುದರಿಂದ ಅನಾಹುತಗಳಿಂದ ಬಚಾವಾಗಬಹುದು ಎಂದು ಹೇಳಿದರು.

ವಿಜ್ಞಾನಿ ಶಾಂತಾ ಬಾಲಗೊಂಡ ಮಾತನಾಡಿ, ಸಂವೇದಕಗಳ ಸಹಾಯದಿಂದ ಸಿಡಿಲಿನ ಚಲನೆಯ ಬಗ್ಗೆ ನಿಖರವಾದ ಸ್ಥಳ ಗುರುತಿಸಿ ಮಾಹಿತಿಯನ್ನು ದಾಮಿನಿ ನೀಡುತ್ತದೆ. ಇದು ಸುತ್ತಮುತ್ತಲಿನ 20 ರಿಂದ 40 ಚದರ ಕಿ.ಮೀ ವರೆಗೆ ಸಂಭವಿಸಲಿರುವ ಸಿಡಿಲಿನ ಬಗ್ಗೆ 30 ರಿಂದ 45 ನಿಮಿಷಗಳ ಮೊದಲು ಎಚ್ಚರಿಕೆ ನೀಡುತ್ತದೆ. ಪ್ರತಿ 15 ನಿಮಿಷಗಳಿಗೊಮ್ಮೆ ಮಾಹಿತಿಯನ್ನು ನವೀಕರಿಸಲಾಗುತ್ತದೆ. ಎಂದು ವಿವರಿಸಿದರು.

ಬಳಕೆಯ ವಿಧಾನ

ರೈತರು ಈ ಆ್ಯಪ್ ಅನ್ನು ಸ್ಮಾರ್ಟ್‌ಫೋನ್‌ನ ಗೂಗಲ್ ಪ್ಲೇಸ್ಟೋರ್ ನಲ್ಲಿ ಡೌನ್ಲೋಡ್ ಮಾಡಿಕೊಂಡು ತಮ್ಮ ಹೆಸರು, ದೂರವಾಣಿ ಸಂಖ್ಯೆ, ವಿಳಾಸ, ಪಿನಕೋಡ್ ಮತ್ತು ಉದ್ಯೋಗವನ್ನು ನಮೂದಿಸಬೇಕು. ಆಗ ಅವರು ಆಯಾ ಪ್ರದೇಶದ ಮಿಂಚಿನ ಮುನ್ಸೂಚನೆ ಮತ್ತು ಎಚ್ಚರಿಕೆಯ ಮಾಹಿತಿಯನ್ನು ಪಡೆಯಬಹುದು ಎಂದರು. ವಿಜ್ಞಾನಿಗಳಾದ ಡಾ.ಲತಾ.ಆರ್.ಕುಲಕರ್ಣಿ, ಎನ್. ಶ್ರೀನಿಧಿ ಇದ್ದರು.

ಟೀಮ್‌ಲೀಸ್ ಸರ್ವೀಸಸ್ ಲಿಮಿಟೆಡ್
CIN: L74140KA2000PLC118395
6ನೇ ಮಹಡಿ, ಬಿಎಂಟಿಸಿ ಕಮರ್ಷಿಯಲ್ ಕಾಂಪ್ಲೆಕ್ಸ್, 80 ಅಡಿ ರಸ್ತೆ, ಕೋರಮಂಗಲ, ಬೆಂಗಳೂರು, ಕರ್ನಾಟಕ-560095, ಭಾರತ.
ದೂರವಾಣಿ: 91 80 6824 3000 | ಫ್ಯಾಕ್ಸ್: 91 80 6824 3001
corporateaffairs@teamlease.com
www.teamleasegroup.com

**ಟೀಮ್‌ಲೀಸ್ ಸರ್ವೀಸಸ್ ಲಿಮಿಟೆಡ್‌ನ ಇಪ್ಪತ್ತನೆಯ (20ನೇ) ವಾರ್ಷಿಕ ಸರ್ವಸದಸ್ಯರ ಸಭೆಯನ್ನು ವಿಡಿಯೊ ಕಾನ್ಫರೆನ್ಸ್ ಅಥವಾ ಇತರೆ ಶ್ರವಣ-ದೃಶ್ಯ ಮಾಧ್ಯಮಗಳ ಮೂಲಕ ನಡೆಸುವ ಬಗ್ಗೆ ಸೂಚನ